ಸಂಶೋಧನಾ ನಿರ್ದೇಶಕರ ಕಛೇರಿ
ಜಿಕೆವಿಕೆ, ಬೆಂಗಳೂರು-560065

ಸಂಖ್ಯೆ: ಸಂ.ನಿ./ದಸ್ತಾವೇಜು/ಮು.ಕಾ./2019-20 ದಿನಾಂಕ: 6.3.2020

## ಸುತ್ತೋಲೆ

**ವಿಷಯ : ಮುಂಗಾರು-2020ರ ವಲಯ ಸಂಶೋಧನಾ ಮತ್ತು ವಿಸ್ತರಣಾ ಕಾರ್ಯಾಗಾರದ ವೇಳಾಪಟ್ಟಿ ಬಗ್ಗೆ**
**ಉಲ್ಲೇಖ : ಸಂ.ನಿ./ದಸ್ತಾವೇಜು/ಮು.ಕಾ./2019-20 ದಿನಾಂಕ: 21.1.2020**

>>><<<

ಈ ಮೇಲಿನ ಉಲ್ಲೇಖದಲ್ಲಿ ತಿಳಿಸಿರುವಂತೆ, ಮುಂಗಾರು-2020ರ ವಲಯ ಸಂಶೋಧನಾ ಮತ್ತು ವಿಸ್ತರಣಾ ಕಾರ್ಯಾಗಾರವನ್ನು ಏಪ್ರಿಲ್, 2020ರಲ್ಲಿ ಹಮ್ಮಿಕೊಳ್ಳಲು ಪ್ರಸ್ತಾಪಿಸಲಾಗಿದೆ. ಈ ಕಾರ್ಯಾಗಾರದಲ್ಲಿ 2019-20ರ ಆಯಾ ವಲಯದ ಸಂಶೋಧನಾ ಫಲಿತಾಂಶಗಳನ್ನು ಪರಿಶೀಲಿಸುವುದು ಮತ್ತು 2020-21ರ ಆಯಾ ವಲಯದ ತಾಂತ್ರಿಕ ಕಾರ್ಯಕ್ರಮಗಳನ್ನು ರೂಪಿಸುವ ಕೆಲಸಗಳಾಗಿರುತ್ತವೆ. ಮುಂಗಾರು-2020ರ ವಲಯ ಸಂಶೋಧನಾ ಮತ್ತು ವಿಸ್ತರಣಾ ಕಾರ್ಯಾಗಾರಗಳ ತಾತ್ಕಾಲಿಕ ವೇಳಾ ಪಟ್ಟಿ ಈ ಕೆಳಕಂಡಂತಿದೆ;

| ವಲಯ | ಸ್ಥಳ | ದಿನಾಂಕ |
|---|---|---|
| ವಲಯ - 6 | ವಲಯ ಕೃಷಿ ಸಂಶೋಧನಾ ಕೇಂದ್ರ, ಮಂಡ್ಯ | 2 ಮತ್ತು 3ನೇ ಏಪ್ರಿಲ್, 2020 |
| ವಲಯ - 5 | ವಲಯ ಕೃಷಿ ಸಂಶೋಧನಾ ಕೇಂದ್ರ, ಜಿ.ಕೆ.ವಿ.ಕೆ., ಬೆಂಗಳೂರು | 7, 8 ಮತ್ತು 9ನೇ ಏಪ್ರಿಲ್ 2020 |

ಈ ನಿಟ್ಟಿನಲ್ಲಿ, ಸಂಬಂಧಪಟ್ಟ ಸಹ ಸಂಶೋಧನಾ ನಿರ್ದೇಶಕರು ಕಾರ್ಯಾಗಾರ ನಡೆಯುವ ಸ್ಥಳ ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದಂತೆ ಸುತ್ತೋಲೆಯನ್ನು ಹೊರಡಿಸಲು ಆದೇಶಿಸಲಾಗಿದೆ. ಎಲ್ಲಾ ವಿಜ್ಞಾನಿಗಳು ಈ ಕಾರ್ಯಕ್ರಮಕ್ಕೆ ಸನ್ನದ್ಧರಾಗಲು ಕೋರಲಾಗಿದೆ. ಇದಲ್ಲದೆ ವಾರ್ಷಿಕ ತಾಂತ್ರಿಕ ಸಭೆಯಲ್ಲಿ ಚರ್ಚಿಸಿ ಅಂತಿಮವಾಗಿ ನಿರ್ಧಾರಗೊಳಿಸಿರುವ ಹೊಸ ಪ್ರಯೋಗಗಳು / ತಳಿ ಬಿಡುಗಡೆಯ ಪ್ರಸ್ತಾವನೆಗಳು / ಕ್ಷೇತ್ರ ಪ್ರಯೋಗದ ಪ್ರಸ್ತಾವನೆಗಳು / ಬಹು ಸ್ಥಳ ಪ್ರಯೋಗಗಳು / ಹೊಸ ತಾಂತ್ರಿಕತೆಗಳನ್ನು ಆಧುನಿಕ ಬೇಸಾಯ ಪದ್ಧತಿಗಳ ಕೈಪಿಡಿಯಲ್ಲಿ ಸೇರ್ಪಡೆಗೊಳಿಸುವುದನ್ನು ಮಾತ್ರ ಕಾರ್ಯಾಗಾರದಲ್ಲಿ ಚರ್ಚೆಗೆ, ಪ್ರಸ್ತುತಿ, ಪರಿಗಣನೆ ಮತ್ತು ಅಂಗೀಕಾರಕ್ಕಾಗಿ ಅವಕಾಶ ನೀಡಲಾಗುವುದು.

2019-20ರ ಸಂಶೋಧನಾ ಫಲಿತಾಂಶಗಳು ಮತ್ತು ವಿಸ್ತರಣಾ ಚಟುವಟಿಕೆಗಳನ್ನು ಆಯಾ ವಲಯದ ಸಹ ಸಂಶೋಧನಾ ನಿರ್ದೇಶಕರು ಕ್ರೋಢೀಕರಿಸಿ ಪುಸ್ತಕ ರೂಪದಲ್ಲಿ ತರಲು ಕೋರಲಾಗಿದೆ.

Website http:// www.uasbangalore.edu.in Notification

ಸಂಶೋಧನಾ ನಿರ್ದೇಶಕರು